ಇ) ಯೋಜನೆಯು ಕಾರ್ಯರೂಪಕ್ಕೆ ಬಂದಮೇಲೆ ಸುಮಾರು ಐದು ವರ್ಷಗಳಲ್ಲಿ ಮುಗಿಸುವ ಯೋಜನೆ ಇದೆ. ರೂಪರೇಖೆ ಯೋಜನೆಯಲ್ಲಿ ನಮೂದಿಸಿರುವ ಅಂದಾಜು ೨೭.೭೦ ಕೋಟಿ ರೂಪಾಯಿಗಳು.

ಶ್ರೀ ಕೆ. ಹೆಚ್. ಹನುಮೇಗೌಡ.—ಇನ್ನೂ ಈ ಯೋಜನೆ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಎಂ. ವೈ. ಘೋರ್ಪಡೆ.—ಇದು ಇಂಡೋ-ಜರ್ಮನ್ ಪ್ರಾಜೆಕ್ಟ್. ಇದು ಇನ್ನೂ ಪ್ರಾರಂಭವಾಗಿಲ್ಲ. ಇದಕ್ಕೆ ಕೇಂದ್ರಸರ್ಕಾರದ ಮಂಜೂರಾತಿ ಇನ್ನೂ ಪಡೆದಿಲ್ಲ. ಈ ಕಾರ್ಯಕ್ರಮದ ಪ್ರಕಾರ ಮೂರು ಜಿಲ್ಲೆಗಳಲ್ಲಿ ಇದನ್ನು ಲಾಗು ಮಾಡಬೇಕು ಎಂದು ಉದ್ದೇಶ ಇದೆ. ಇದು ಜಾರಿಯಲ್ಲಿ ಬಂದರೆ ೨೭ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇದರಲ್ಲಿ ಹತ್ತು ಪರ್‌ಸೆಂಟ್ ಅಂದರೆ ೨.೭ ಕೋಟಿ ರೂಪಾಯಿ ಮಾತ್ರ ನಮ್ಮ ಸರ್ಕಾರದ್ದು. ಪ್ರೋಗ್ರಾಂ ಈ ರೀತಿ ಇದೆ ಈ ಪೈಪ್ ವಾಟರ್ ಸಪ್ಲೈ ಸ್ಕೀಮ್ ೯೦-೯೦: ೯೦ ಮಿನಿ ವಾಟರ್ ಸಪ್ಲೈ ಸ್ಕೀಮ್, ಪೈಪ್‌ವಾಟರ್ ಸಪ್ಲೈ ಆಗ್ ಮೆಂಟೇಷನ್, ಅದು ಒಂದು ೮೭ ಮತ್ತೆ ೬೫ ಆಗ್‌ಮೆಂಟೇಷನ್ ಫಾರ್ ಮಿನಿ ವಾಟರ್ ಸಪ್ಲೈ ಸ್ಕೀಮ್. ಈ ಪ್ರಪೋಸಲ್ ಮಾರ್ಚ್ ೮೯ರಲ್ಲಿ ಬಂತು. ಫೆಬ್ರವರಿ ೮೯ರಲ್ಲಿ ಬಿಡಬೇಕೆಂದು ಚರ್ಚೆ ನಡೆಯಿತು. ಎರಡು ಜಿಲ್ಲೆಗಳಲ್ಲಿ ಇದನ್ನು ದಕ್ಷಿಣ ಕನ್ನಡ ಜಿಲ್ಲೆ ಇದರಲ್ಲಿ ಬಿಟ್ಟು ಬಿಟ್ಟು ವರ್ಲ್ಡ್ ಬ್ಯಾಂಕ್‌ಪ್ರಾಜೆಕ್ಟ್‌ನಲ್ಲಿ ಸೇರಿಸಬೇಕೆಂದು ಹೀಗಾಗಿ ಒಂದು ವರ್ಷ ಆಯಿತು ವಿಳಂಬವಾಗಿದೆ. ೨೬-೩-೮೯ಕ್ಕೆ ಈ ಪ್ರಪೋಸಲ್ ಪುನಃ ನಾವು ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇವೆ. ಮತ್ತೆ ಈ ಸ್ಟೇಟ್ ಕೋಆರ್ಡಿನೇಷನ್ ಕಮಿಟಿ, ಚೀಫ್ ಸೆಕ್ರೆಟರಿ ಇವರಲ್ಲಿ ಕ್ಲಿಯರ್ ಆದನಂತರ ಕ್ಯಾಬಿನೆಟ್ ಮುಂದೆ ಬರುತ್ತದೆ. ಇದನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಈ ಯೋಜನೆಯಲ್ಲಿ ಖರ್ಚುಮಾಡಲಿಕ್ಕೆ ಯೋಚನೆ ಮಾಡಿರುವ ೨೭ ಕೋಟಿ ೭ ಲಕ್ಷ ರೂಪಾಯಿನಲ್ಲಿ ಜರ್ಮನಿ ಸರ್ಕಾರ ಎಷ್ಟು ಹಣವನ್ನು ಕೊಡುತ್ತದೆ. ಅದೆಲ್ಲ, ಪೂರ್ತಿ ಗ್ರಾಂಟೇ ಅಥವಾ ಸಾಲವೇ ? ರಾಜ್ಯ ಸರ್ಕಾರ ೨.೭೦ ಲಕ್ಷ ರೂಪಾಯಿ ದುಡ್ಡು ಹಾಕೆ ಬೇಕಾಗುತ್ತದೆಂದು ಹೇಳಿದಿರಿ. ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ಕೊಡುತ್ತಾರೆ. ಅವರು ಸಾಲದ ರೂಪದಲ್ಲಿ ಕೊಡುತ್ತಾರೋ ಅಥವಾ ಗ್ರಾಂಟ್ ರೂಪದಲ್ಲಿ ಕೊಡುತ್ತಾರೋ ತಿಳಿಸಿ ?

ಶ್ರೀ ಎಂ. ವೈ. ಘೋರ್ಪಡೆ.—ನಾನು ಆಗಲೇ ಹೇಳಿದ ಪ್ರಕಾರ ನಮಗೆ ಇರತಕ್ಕ ಮಾಹಿತಿ ೨೭.೭ ಕೋಟಿ ರೂಪಾಯಿ ಇದರಲ್ಲಿ ೨.೭ ಕೋಟಿ ರೂಪಾಯಿ ಮಾತ್ರ ನಮ್ಮದು. ಬಾಕಿಯದೆಲ್ಲಾ ಜರ್ಮನಿಯಿಂದ ಬರುವಂಥದ್ದು. ಮತ್ತೆ ನಮ್ಮ ಕೇಂದ್ರ ಸರ್ಕಾರದಿಂದ ಕೂಡ ಅವರ ನಿಯಮಗಳ ಪ್ರಕಾರ ಹಣ ಬರುತ್ತದೆ. ಮತ್ತೆ ಅಲ್ಲಿಂದ ನಮಗೆ ಬರುತ್ತದೆ. ಅದರಲ್ಲಿ ಇನ್ನು ಹೆಚ್ಚಿಗೆ ರೀಟೈಲ್ಸ್ ಇಲ್ಲ. ಅದರ ಅವಶ್ಯಕತೆ ಕೂಡ ಇಲ್ಲ. ಏಕೆಂದರೆ, ಇನ್ನೂ ನಾವು ಈ ಪ್ರಾಜೆಕ್ಟ್ ಅಲ್ಲಿ ಕಳುಹಿಸಿಲ್ಲವಾ ನಾವು ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿ ಕಳುಹಿಸಿದಾಗ ಮಾತ್ರ ಕಾರ್ಯಗತ ಮಾಡಲಿಕ್ಕೆ ಸಾಧ್ಯ.

ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಲ್ಲಿ ಅವ್ಯವಹಾರಗಳು

೪೬೩. ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ೧೯೮೮-೮೯ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಬರಪೀಡಿತ ಪ್ರದೇಶದ ಸಣ್ಣ ರೈತರಿಗೆ ಬೀಜ, ರಾಸಾಯನಿಕ ಗೊಬ್ಬರವನ್ನು ಉಚಿತವಾಗಿ ವಿತರಣೆ ಮಾಡಲು ಗುಲ್ಬರ್ಗಾ ಜಿಲ್ಲಾ ಪರಿಷತ್‌ಗೆ ಬಿಡುಗಡೆಯಾದ ಒಂದು ಕೋಟಿ ರೂಪಾಯಿಗಳ ಅವ್ಯವಹಾರದ ಬಗ್ಗೆ ಸಿ.ಒ.ಡಿ. ತನಿಖೆ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸಿ. ಒ. ಡಿ. ವರದಿ ಬಂದಿದೆಯೇ ?

ಇ) ಈ ಅವ್ಯವಹಾರದಲ್ಲಿ ನೇರವಾಗಿ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ದರ್ಶಿಗಳು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ನಿರ್ಣಯ ಕೈಗೊಂಡಿದ್ದು ನಿಜವೇ ?

ಈ) ಹಾಗಿದ್ದಲ್ಲಿ ಇದು ಕಾನೂನು ಬಾಹಿರವಲ್ಲವೇ ?

ಉ) ಕಾನೂನು ಬಾಹಿರವಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು).—

ಅ) ಹೌದು ಸದರಿ ವಿಷಯವು ಇನ್ನೂ ಸಿ. ಓ. ಡಿ. ಯವರ ತನಿಖೆಯಲ್ಲಿ ಇರುತ್ತದೆ.

ಆ) ಇನ್ನೂ ಬಂದಿರುವುದಿಲ್ಲ.

ಇ) ಸಿ. ಓ. ಡಿ. ಯವರ ವರದಿಯು ಬಂದ ನಂತರ ಈ ವಿಷಯವು ತಿಳಿಯುತ್ತದೆ.

ಈ) ಸಿ. ಓ. ಡಿ. ವರದಿಯು ಬಂದ ತಕ್ಷಣ ಕಾನೂನು ಪ್ರಕಾರ ಸೂಕ್ತ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು.

ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ.—ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಹೌದು ಸದರಿ ವಿಷಯವು ಇನ್ನೂ ಸಿ. ಓ. ಡಿ. ಯವರ ತನಿಖೆಯಲ್ಲಿ ಇರುತ್ತದೆ. (ಆ) ಪ್ರಶ್ನೆಗೆ, ಇನ್ನೂ ಬಂದಿರುವುದಿಲ್ಲ, (ಇ) ಮತ್ತು (ಈ) ಪ್ರಶ್ನೆಗೆ ಸಿ. ಓ. ಡಿ. ಯವರ ವರದಿಯು ಬಂದ ನಂತರ ಈ ವಿಷಯವು ತಿಳಿಯುತ್ತದೆ. (ಉ) ಪ್ರಶ್ನೆಗೆ ಸಿ. ಓ. ಡಿ. ವರದಿಯು ಬಂದ ತಕ್ಷಣ ಕಾನೂನು ಪ್ರಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಅಧ್ಯಕ್ಷರೇ ಈ ಅವ್ಯವಹಾರದ ಬಗ್ಗೆ ಸಂಬಂಧಪಟ್ಟ ಕೆಲವು ಕಡತಗಳನ್ನು ಈಗಾಗಲೇ ತಮಗೆ ಕಳುಹಿಸಿದ್ದೇನೆ, ನಾನು ಇದರ ಬಗ್ಗೆ ಸಾಮಾನ್ಯ ಸಭೆಯ ದಿನಾಂಕ ೩೧–೫–೮೯ರಂದು ಮಂಡಿಸಿದರೆ ತನಿಖೆಯಾಗಿ ನಿರ್ಣಯ ಕೈಗೊಂಡು ಒಂದು ವರ್ಷ ಆದರೂ ಸಹ ಸಿ. ಓ. ಡಿ. ವರದಿ ಬರಲಾಗದ ಕಾರಣ ಮಾರ್ಚಿ ತಿಂಗಳಿನಲ್ಲಿ ಇದೇ ಸದನದಲ್ಲಿ ಕೇಳಿದರೆ ತೀವ್ರ ವರದಿಯನ್ನು ತರಿಸಿ. ಅದರ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ, ಆದರೆ ಸಿ. ಓ. ಡಿ. ವರದಿ ಬಗ್ಗೆ ಎಷ್ಟು ವಿಳಂಬವಾಗಿದ್ದು ಏತಕ್ಕೆ ? ಇನ್ನು ಜಿಲ್ಲಾ ಪರಿಷತ್ ಅಧ್ಯಕ್ಷರು, ಮುಖ್ಯ ಕಾರ್ಯದರ್ಶಿಗಳು ಸರ್ಕಾರದ ನಾರಮ್ಸ್ ೧೪–೨–೮೯ನ್ನು ಕಡೆಗಣಿಸಿದ್ದನ್ನು ಸ್ಪಷ್ಟವಾಗಿ ಸರ್ಕಾರದ ಆದೇಶದಲ್ಲಿ ತೋರಿಸುತ್ತಾರೆ, ಅದನ್ನು ತಮ್ಮ ಗಮನಕ್ಕೂ ಈಗಾಗಲೇ ಕಳುಹಿಸಿದ್ದೇವೆ.

ಅಧ್ಯಕ್ಷರು.—ಈಗ ಪೂರಕ ಉತ್ತರದಲ್ಲಿ ಇದೆ. ತಾವು ಪ್ರಶ್ನೆ ಕೇಳಿ ?

ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ.—ಕೃಷಿ ಸಮಿತಿಯ ನಿರ್ಣಯಗಳನ್ನು ಕಡೆಗಣಿಸಿ. ಸರ್ಕಾರದ ಆದೇಶವನ್ನು ಕಡೆಗಣಿಸಿ. ಜಿಲ್ಲಾ ಪರಿಷತ್ ಸಾಮಾನ್ಯ ಸಭೆಯ ಗಮನಕ್ಕೆ ತರದೇ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಗಳು ಸರ್ಕಾರದ ಆದೇಶದ ಪ್ರಕಾರ ಬಿತ್ತಣಿಕೆ ಸಹಾಯಾರ್ಥ ಬೀಜ, ರಾಸಾಯನಿಕ ಗೊಬ್ಬರ ವಿತರಣೆ ಮಾಡಲಾಗದೆ ಬಿಟ್ಟು ಮೂಲ ಬೆಲೆಗಿಂತಲೂ ೮–೧೦ ಪಟ್ಟು ಹೆಚ್ಚು ಬೆಲೆ ನಿಗದಿ ಮಾಡಿಸಿದ್ದು ಅವರಿಬ್ಬರೇ ಸೇರಿ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಜಿಲ್ಲಾ ಪರಿಷತ್ ನಿರ್ಣಯಗಳನ್ನು ಕಡೆಗಣಿಸಿದ್ದು ಸಾಬೀತಾಗಿದ್ದರೂ ಸಹ ಕ್ರಮವನ್ನು ತೆಗೆದುಕೊಂಡಿಲ್ಲ ಏಕೆ ?

ಶ್ರೀ ಎಂ. ವೈ. ಘೋರ್ಪಡೆ.—ಇದು ಬಹಳ ಗಂಭೀರವಾದ ಸಮಸ್ಯೆ ಸಂಕ್ಷಿಪ್ತವಾಗಿ ಹೇಳುವುದಾದರೆ ೧೫೭ ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಿರಬಹುದು.

ಒಬ್ಬ ಮಾನ್ಯ ಸದಸ್ಯರು.—ಖಚಿತವಾಗಿ ನಡೆದಿರುವಾಗ ನಡೆದಿರಬಹುದು ಎಂದು ಹೇಳುವುದು ಸರಿಯಾದ ಪದ ಅಲ್ಲ. ತಾವು ಸರಕಾರದಿಂದ ಉತ್ತರ ಕೊಡಿಸ್ತಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ.—ಇದರ ಬಗ್ಗೆ ಸಿ. ಓ. ಡಿ. ತನಿಖೆ ನಡೆಯುತ್ತಿದೆ. ಅದರ ವರದಿ ಬಂದ ಮೇಲೆ ಏನು ನಡೆದಿದೆ ಎಂಬುದನ್ನು ನಾನು ಹೇಳಬಲ್ಲೆ.

MR. SPEAKER.—When was it referred to the COD ?

(ಗೊಂದಲ)

SRI M. Y. GHORPADE.—On 25-2-89 this amount was adjusted This pertains to something between February and March 1989. ನಮ್ಮ ಆಡಿಟ್ ಜನರು ಹೋದರು. ಅದರ ಪ್ರಕಾರ ಅಲ್ಲಿ ಪರ್ಚೇಸ್ ಮಾಡುವಾಗ ೫೦ ಪರ್ಸೆಂಟ್ ಅಸಿಸ್ಟೆಂಟ್ಸ್ ಅನ್ನು ರಿಲೀಸ್ ಮಾಡಿದ್ದು ಅದನ್ನ ಸರಿಯಾಗಿ ಉಪಯೋಗಿಸಿಕೊಂಡಿಲ್ಲ. Audit pointed out that while purchasing the implements neither the Principal Agricultural Officer was consulted regarding the type of implements that would be required by the farmers of the region before placing orders on 17-2-89, nor the Chief Accounts Officer

was consulted in the matter. This according to me is a serious lapse in procedure. ಸಂಬಂಧಪಟ್ಟ ಅಧಿಕಾರಸ್ಥರನ್ನು ಕೇಳದೇ ನಾನ್ ಅಫಿಷಿಯಲ್ ಸದಸ್ಯರು ಈ ರೀತಿ ಮಾಡುವುದಾದರೆ ಅದು ಸರಿಯಲ್ಲ. ತಪ್ಪು ಮಾಡಿದ್ದಾರೆಂಬುದು ಇದರಿಂದ ಗೊತ್ತಾಗುತ್ತದೆ.

(ಗೊಂದಲ)

MR. SPEAKER.—Besides it is more than one year since it was referred to COD.

MR. M.Y. GHORPADE.—But this has come to my notice only now and we are not sparing any time to get the COD report since it has been referred to it.—We will take most strick action. ಈ ಕ್ರಮ ನಡೆದಿದೆ ನಮ್ಮ ಕಾಯಿದೆಯಲ್ಲಿ ಈ ರೀತಿಯಾದಂತಹ ಅಕ್ರಮ ನಡೆಯಲಿಕ್ಕೆ ಯಾವ ಆತಂಕವೂ ಇಲ್ಲ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಈ ರೀತಿಯ ಆತಂಕ ನಡೆಯಲಿಕ್ಕೆ ಸಾಕಷ್ಟು ಅವಕಾಶ ಮಾಡಿಕೊಟ್ಟಂತಾಗಿದೆ. ಇದನ್ನು ತಕ್ಷಣ ಸರಿಪಡಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ.—ವಿರೋಧ ಪಕ್ಷದ ನಾಯಕರೂ ಕೂಡ ಇದರ ಬಗ್ಗೆ ಗಮನ ಕೊಡಬೇಕು.

ಅಧ್ಯಕ್ಷರು.—ಆರ್ಡರ್, ಆರ್ಡರ್, ಮೊದಲು ಅವರ ಗಮನವನ್ನು ಸೆಳೆಯಿರಿ.

ಶ್ರೀ ಎಂ. ವೈ. ಘೋರ್ಪಡೆ.—ಮೂಲಭೂತವಾದ ತಪ್ಪನ್ನು ಅವರೇ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಒಬ್ಬೊಬ್ಬರಾಗಿ ಕೇಳಿ.

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ರಾಜ್ಯದಲ್ಲಿರತಕ್ಕಂತಹ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೂಲಭೂತವಾದ ತಪ್ಪು ಏನು ಎಂದರೆ ಅಧಿಕಾರಸ್ಥರು ಏನು ಮಾಡಬೇಕು ನಾನ್ ಅಫಿಷಿಯಲ್ಸ್ ಏನು ಮಾಡಬೇಕು ಎಂಬ ಬಗ್ಗೆ ಸ್ಪಷ್ಟವಾಗಿ ಬರೆದಿಲ್ಲ.

೪-೦೦ ಪಿ. ಎಂ.

ಇವತ್ತು ಅಫಿಷಿಯಲ್ಸ್ ಮಾಡುವಂಥ ಕೆಲಸ ಎಂದರೆ ಆರ್ಡರ್ಸ್ ಪ್ಲೇಸ್ ಮಾಡತಕ್ಕದ್ದು, ಇನ್ ವಾಯ್ಸ್‌ಗೆ ಸಹಿ ಮಾಡತಕ್ಕದ್ದು. ಇದನ್ನು ನಾನ್ ಅಫಿಷಿಯಲ್ ಮಾಡಿದರೆ ನ್ಯಾಯವಾಗಿ ನೋಡಿದರೆ ಅವರನ್ನು ಕೇವಲ ಸಸ್ಪೆಂಡ್ ಮಾಡುವುದೇ ಅಲ್ಲ ಅವರನ್ನು ಅರೆಸ್ಟ್ ಮಾಡಿ, ಶಿಕ್ಷೆಯನ್ನು ಕೂಡ ಬೇಕಾಗುತ್ತದೆ...

ಶ್ರೀ ಆರ್.ಎನ್. ನಾಯಕ್.—ಅವರನ್ನು ಅರೆಸ್ಟ್ ಮಾಡಿ, ಶಿಕ್ಷೆ ಮಾಡಿ ಏತಕ್ಕೆ ಮಾಡಬಾರದು?

(ಗೊಂದಲ)

ಅಧ್ಯಕ್ಷರು.—ಮೊದಲು ಅವರು ತಮ್ಮ ಉತ್ತರವನ್ನು ಮುಂಗಿಸಲಿ ಇರಿ.

(ಗೊಂದಲ)

ಶ್ರೀ ಎಂ. ವೈ. ಘೋರ್ಪಡೆ.—ನಾನು ನಿಮ್ಮ ವಿರುದ್ಧವಾಗಿ ಏನೂ ಹೇಳುತ್ತಿಲ್ಲ. ಈ ಪ್ರಜಾ ಪ್ರಭುತ್ವದಲ್ಲಿ ನಾನ್ ಅಫಿಷಿಯಲ್ಸ್ ಮರ್ಯಾದೆಯಿಂದ ನೋಡಿಕೊಳ್ಳಬೇಕಾಗುತ್ತದೆ. ಮಾತು ಮಾತಿಗೂ ನಾವು ಅವರನ್ನು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸುವುದಾದರೆ ಈ ಪ್ರಜಾಪ್ರಭುತ್ವಕ್ಕೇ ಧಕ್ಕೆ ಬರುತ್ತದೆ.....

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್, ಆರ್ಡರ್.....

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ತಪ್ಪು ಮಾಡಿದವರು ಯಾರೇ ಆಗಿರಲಿ ಅವರಿಗೆ ಶಿಕ್ಷೆ ಆಗಲೇ ಬೇಕು.....

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್.....

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ ನನ್ನದೊಂದು ಕ್ರಿಯಾಲೋಪ ಇದೆ...

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ಕಾನೂನನ್ನು ಬದಲಾಯಿಸಿ ಅವರ ಅಧಿಕಾರ ಏನಿದೆ? ಇವರ ಅಧಿಕಾರ ಏನಿದೆ ಎಂಬುದನ್ನಿ ಸ್ಪಷ್ಟಪಡಿಸಿ we could pin the responsibility on officials.....

ಶ್ರೀ ಶಿವಶಂಕರಪ್ಪ ಶಿರ್ವಾಲ್.—ಸನ್ಮಾನ್ಯ ಸಭಾದ್ಯಕ್ಷರೆ, ನಾನು ಗುಲ್ಬರ್ಗಾ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಸದಸ್ಯನಾಗಿರುವುದರಿಂದ ಹೇಳುತ್ತಿದ್ದೇನೆ. ಅಲ್ಲಿ 1.50 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಇದರ ಬಗ್ಗೆ ಕಳೆದ ಶಾಸನ ಸಭೆಯಲ್ಲಿ ಕೂಲಂಕಷವಾಗಿ ಚರ್ಚೆಯಾಗಿದೆ. ಆಗ ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಈ ಕೂಡಲೇ ತಾವು ಇದರ ಬಗ್ಗೆ ಸಿ. ಒ. ಡಿ.ಯಿಂದ ತನಿಖೆ ಮಾಡಿಸಿ, ವರದಿಯನ್ನು ತರಿಸಿ ಸಂಬಂಧಪಟ್ಟವರ ಮೇಲೆ ಸಸ್ಪೆಂಡ್ ಮಾಡುವುದೋ ಅಥವಾ ಬೇರೆ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದೋ ಮಾಡುತ್ತೇವೆಂದು ಹೇಳಿದ್ದರು. ಸುಮಾರು 1 ವರ್ಷದ ಮೇಲಾದರೂ ಕೂಡ ಸರ್ಕಾರ ಇದರ ಬಗ್ಗೆ ಏತಕ್ಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ ? ಇಷ್ಟೆಲ್ಲಾ ಅವ್ಯವಹಾರವಾಗಿದೆಯೆಂದು ಮಾನ್ಯ ಸಚಿವರೇ ಒಪ್ಪಿಕೊಂಡರೂ ಕೂಡ ಇನ್ನೂ ಏತಕ್ಕೆ ಅವರನ್ನು ಸಸ್ಪೆಂಡ್ ಮಾಡಬಾರದು ? ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

SRI M. Y. GHORPADE.—Therefore, in my view, it is very important for the law to make it clear that the head of the Zilla Parishad may be the non-official and the Chief Secretary is the Chief executive of the Zilla Parishad. Only than we can held him responsible for minor and major faults and the law can take its course.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ನಾನ್ ಆಫಿಷಿಯಲ್‌ನಿಂದ ಕೂಡಿರತಕ್ಕ ಸಮಿತಿಯವರು ಖರೀದಿ ಮಾಡಬೇಕೆಂದು ತೀರ್ಮಾನ ಮಾಡಿದರೂ ಕೂಡ ಹಣವನ್ನು ಪಾವತಿ ಮಾಡತಕ್ಕ ಅಧಿಕಾರ ಚೀಫ್ ಸೆಕ್ರೆಟರಿಯವರಿಗೇ ಇರತಕ್ಕುದು. ಒಂದು ವೇಳೆ ಕಾನೂನಿಗೆ ವಿರುದ್ಧವಾಗಿ ಅವರು ಖರೀದಿ ಮಾಡತಕ್ಕ ತೀರ್ಮಾನವನ್ನು ಮಾಡಿದ್ದರೆ, the Chief Secretary has got powers to refuse to make payments. The moment he has issued the cheque for the payment of purchases, there ends the matter and he is also partly held responsible for the fraud committed.

SRI M. Y. GHORPADE.—Let us not go to the details. Broadly I have told you this should be the bifurcation, this should be the principle and what the non-officials should do and what the Officials should do. It is the British principle that is brought in this country for so many hundred years Now we cannot suddenly introduce American President somewhere....

(ಗೊಂದಲ)

MR. SPEAKER.—What is happenning here ?

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಒಂದು ಕ್ರಿಯಾಲೋಪವನ್ನು ಎತ್ತುವುದಕ್ಕೆ ತಾವು ಅವಕಾಶವನ್ನು ಕೊಡಲಿಲ್ಲ. ನನ್ನ ಒಂದು ಮನವಿ.....

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ. ಇದರಲ್ಲಿ ನಾವು ಬಹಳ.....

ಶ್ರೀ ವಾಟಾಳ್ ನಾಗರಾಜ್.—ತಾವು ಕರೆದಾಗ ನಾವು...

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆ ಇಲ್ಲಿ ಸ್ಪಷ್ಟವಾಗಿದೆ, ಆ ಪ್ರಶ್ನೆಗೆ ಇವರು ಉತ್ತರವನ್ನು ಕೊಡುವಾಗ ಏನು ಹೇಳಿದ್ದಾರೆಂದರೆ, ಇದು ಸಿ.ಓ.ಡಿ.ಗೆ ರೆಫರ್ ಆಗಿದೆ. ಅಲ್ಲ ಸುಮಾರು 1.50 ಕೋಟಿ ರೂಪಾಯಿ ದುರುಪಯೋಗವಾಗಿದೆ ಎಂದು ಹೇಳಿರತಕ್ಕ ಕಂಪ್ಲೇಂಟ್ ಏನಿದೆ ಅದನ್ನು ಸಿ. ಓ. ಡಿ. ಯವರು ಎನ್‌ಕ್ವೈರಿ ಮಾಡುತ್ತಿದ್ದಾರೆ. ಇದು ಸಿ. ಓ. ಡಿ.ಗೆ ಯಾವಾಗ ರೆಫರ್ ಆಯಿತು ಎಂದು ನಾನು ಕೇಳಿದೆ. ಅದಕ್ಕೆ ಅವರು ಹೇಳಿದರು 1 ವರ್ಷವಾಯಿತು. ಇದು ೧೯೯೯ರಲ್ಲಿ ರೆಫರ್ ಆಗಿದೆ ಅಂತ. ಈ ಸಿ. ಓ. ಡಿ. ಎನ್‌ಕ್ವೈರಿಯನ್ನು ಬೇಗ ಮಾಡಿಸಿ ಅನಂತರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳತಕ್ಕದ್ದು ಒಂದು ಭಾಗ. ಎರಡನೆಯ ಭಾಗ ಏನೆಂದರೆ ಜಿಲ್ಲಾ ಪರಿಷತ್‌ಗೆ ಅಧಿಕಾರವನ್ನು ಹೆಚ್ಚು ಮಾಡಬೇಕೆ ಅಥವಾ ಅದನ್ನು ಕಡಿಮೆ ಮಾಡಬೇಕೆ ಎನ್ನುವ ಎಲ್ಲಾ ವಿಚಾರಗಳೂ ಕೂಡ ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಅದನ್ನು ಚರ್ಚೆ ಮಾಡಬಹುದಾಗಿತ್ತು.

(ಗೊಂದಲ)

ಆರ್ಡರ್ ಆರ್ಡರ್ ಶ್ರೀ ಧರ್ಮಸಿಂಗ್‌ರವರನ್ನು ಕರೆದಿರುತ್ತೇನೆ. ಅವರು ಮಾತ್ರ ಮಾತನಾಡಲಿ. ದಯವಿಟ್ಟು ಬೇರೆಯವರೆಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

Nothing shall go on the record. Only the names which I call out during question hour, and only their interpolations will go into the record. I have called upon Mr. Dharam Singh.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ ಮಾನ್ಯ ಬಸಪ್ಪರೆಡ್ಡಿಯವರು ಎತ್ತಿರತಕ್ಕಂಥ ಪ್ರಶ್ನೆಯಾದರೂ ಇಷ್ಟೆ. ಅದಕ್ಕೆ ಮೊದಲೂ ಕೂಡ ಈ ಪ್ರಶ್ನೆಯ ಬಗ್ಗೆ ವಿಧಾನ ಸಭೆಯಲ್ಲಿ ಕೇಳಿದ್ದರು. ಆಗ ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿದ್ದೇವೆ, ರಿಪೋರ್ಟ್ ಬಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಇವೊತ್ತು ಮಿಸ್ ಅಪ್ರೊಪ್ರಿಯೇಷನ್ ಆಗಿರುವ ಬಗ್ಗೆ ಆಗಿನ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಭೆಯಲ್ಲಿ ಚರ್ಚೆ ನಡೆದಾಗ ನಾನೂ ಕೂಡ ಅಲ್ಲಿ ಹಾಜರಿದ್ದೆ, ಒಂದು ಕೋಟಿ ರೂಪಾಯಿಗಳಷ್ಟು ಹಣ ಮಿಸ್‌ಅಪ್ರೊಪ್ರಿಯೇಷನ್ ಆಗಿದೆ ಎಂದು ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಗುಲ್ಬರ್ಗಾ ಜಿಲ್ಲಾ ಪರಿಷತ್ ಒಂದು ರೆಸಲ್ಯೂಷನ್ ಮಾಡಿ ಸಿ.ಓ.ಡಿ. ಎನ್‌ಕ್ವೈರಿ ಆಗಲಿ ಎಂದು ಪಾಸ್ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಹಾಗಿದ್ದರೂ ಸಿ. ಓ. ಡಿ. ಎನ್‌ಕ್ವೈರಿ ನಡೆಯಲು ಏತಕ್ಕೆ ಇಷ್ಟೊಂದು ಲೇಟು ಎನ್ನುವುದು ನಮ್ಮ ಪ್ರಶ್ನೆ? ಹೋದ ಸಲ ವಿಧಾನ ಸಭೆಯಲ್ಲೂ ಹೇಳಿದ್ದೇವೆ. ಆಗ ಇದರ ಬಗ್ಗೆ ತೀರ್ವವಾಗಿ ರಿಪೋರ್ಟ್ ತರಿಸಿಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಈಗಲೂ ಮಂತ್ರಿಗಳು ಒಪ್ಪಿಕೊಳ್ಳುತ್ತಿದ್ದಾರೆ. ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ಇಷ್ಟೊಂದು ಅವ್ಯವಹಾರ ಆಗಿದೆ ಎಂದು ಹೇಳಿದ ಮೇಲೂ, ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕು, ಏತಕ್ಕೆಂದರೆ ನಾವು ಹೇಳುವುದಿಷ್ಟೇ ಎಕ್ಸಿಸ್ಟಿಂಗ್ ಆಕ್ಟ್ ಇದೆ ರೂಲ್ಸ್ ಇದೆ. ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳಬಹುದು. ಸಾರ್ವಜನಿಕರ ಹಣ ಗುಲ್ಬರ್ಗಾ ಜಿಲ್ಲಾ ಪರಿಷತ್‌ನಲ್ಲಿ ದುರುಪಯೋಗ ವಾಗಿರುವ ಬಗ್ಗೆ ವಿಧಾನ ಸಭೆಯಲ್ಲಿ ನಾವು ನೇರವಾಗಿ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಸಚಿವರಿಂದ ಸ್ಪಷ್ಟವಾದ ಉತ್ತರ ಬಂದಿಲ್ಲ. ಆದ್ದರಿಂದ ನಮಗೆ ಸ್ಪಷ್ಟವಾದ ಉತ್ತರಬೇಕು ? ತಪ್ಪಿತಸ್ಥರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಅಷ್ಟೆ ಕೇಳುತ್ತಿರುವುದು ?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏತಕ್ಕೆ ಇಷ್ಟೊಂದು ಉದ್ವೇಗಗೊಳ್ಳುತ್ತಿರುತ್ತಾರೋ ನನಗೆ ಅರ್ಥವಾಗುತ್ತಿಲ್ಲ. ಇದೇನು ಪಕ್ಷದ ಪ್ರಶ್ನೆಯಲ್ಲ. ನಮ್ಮ ಪಕ್ಷದವರೇ ಆಗಿರಬಹುದು, ಇನ್ನೊಂದು ಪಕ್ಷದವರೇ ಆಗಿರಬಹುದು. ಇದರಲ್ಲಿ ಆಕ್ರಮಣ ನಡೆದಿದೆ ಎಂಬುದು ಇತ್ತೀಚಿಗೆ ಮಾತ್ರ ಗೊತ್ತಾದುದು. ನೀವು ಕೇಳಿದ್ದು ಸಿ. ಓ. ಡಿ. ಗೆ ಯಾವಾಗ ರೆಫರ್ ಆಯಿತು ಎಂದು. ಇದು ೨೬-೨-೧೯೯೯ರಂದು ಸಿ. ಓ. ಡಿ.ಗೆ ರೆಫರ್ ಆಗಿದೆ. ನಾನು ತಮಗೆ ಮೊದಲೇ ತಿಳಿಸಿದ್ದೇನೆ, ಅವರಿಂದ ವರದಿಯನ್ನು ತಕ್ಷಣ ತರಿಸಿಕೊಳ್ಳುತ್ತೇನೆ. ವರದಿ ಬಂದ ನಂತರ ಅವರು ಯಾರೇ ಇರಲಿ ಕಾನೂನು ಪ್ರಕಾರ ಅವರಿಗೆ ಏನು ಶಿಕ್ಷೆಯನ್ನು ಕೊಡಬೇಕೋ ಅದನ್ನು

ಕೊಡಲು ಸಿದ್ಧರಾಗಿದ್ದೇವೆ, ನನಗೇನು ಅವರು ಆಪ್ತರಲ್ಲ. ಆದರೆ ಅದಕ್ಕೆ ಒಂದು ಹೆಜ್ಜೆ ಮುಂದಿಟ್ಟು ಪ್ರಶ್ನೆಗೆ ಉತ್ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೆ. ಇಂಥ ಘಟನೆಗಳು ಇದು ಒಂದು ಕಡೆ ಅಲ್ಲ, ಕರ್ನಾಟಕದಲ್ಲಿ ಎಷ್ಟೋ ಕಡೆ ನಡೆಯುತ್ತಿದೆ, ಇದರಿಂದ ವಿಕೇಂದ್ರೀಕರಣದ ಸಿದ್ಧಾಂತಕ್ಕೆ ಪೆಟ್ಟು ಬೀಳುವ ರೀತಿಯಲ್ಲಿ ಇಲ್ಲಿ ನಡೆಯುತ್ತಿವೆ. ಇದನ್ನು ಸರಿಪಡಿಸಬೇಕಾದರೆ ಕಾನೂನಿನಲ್ಲಿರತಕ್ಕ ದೋಷಗಳನ್ನು ಸ್ಪಷ್ಟವಾಗಿ ತಿದ್ದಬೇಕು ಇಲ್ಲದಿದ್ದರೆ ವಿಕೇಂದ್ರೀಕರಣದ ವಿಚಾರ ಏನಿದೆ ಅದರಲ್ಲಿ ಹಳ್ಳಿ ಮಟ್ಟದ ಜನರು ಭಾಗಿಯಾಗಬೇಕೆಂಬ ನೀತಿ ಏನಿದೆ ಅದಕ್ಕೆ ಕೊಡಲಿ ಪೆಟ್ಟು ಇಟ್ಟಂತಾಗುತ್ತದೆ. ನನ್ನಿಂದ ಆ ಕೆಲಸ ನಡೆಯುವುದಕ್ಕೆ ಸಾಧ್ಯವಿಲ್ಲ. ನಾನು ಯಾವುದೇ ಕೆಲಸ ಮಾಡಿದರೂ ಕೂಡ ಹಳ್ಳಿಯ ಮಟ್ಟದಲ್ಲಿರತಕ್ಕ ಜನಶಕ್ತಿಗೆ ಧಕ್ಕೆ ತರುವಂಥ ಪ್ರಶ್ನೆ ಬಂದರೆ ಖಂಡಿತವಾಗಿ ಮಂತ್ರಿ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್.—ಮಂತ್ರಿಗಳು ಹೇಳಿದ್ದನ್ನು ನಾವು ಕೇಳಿದ್ದೇವೆ, ಇದೇ ರೀತಿ ಜಿಲ್ಲಾ ಪರಿಷತ್ತಿನಲ್ಲಿ ಆಕ್ಷೇಪಗಳು ಒಂದಲ್ಲ ಒಂದು ರೀತಿಯಲ್ಲಿ ನಡೆದಿರುವುದು ಇದೆ. ತುಮಕೂರು ಜಿಲ್ಲಾ ಪರಿಷತ್ತಿನಲ್ಲೂ ನಡೆದಿದೆ. ಆದನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿದರು. ಅಲ್ಲಿ ಅಪರಾಧಿ ಎಂದು ಸಾಬೀತಾದ ಅಧಿಕಾರಿಗೆ ಬಡ್ತಿ ಕೊಟ್ಟು ಅವರಿಗೆ ಒಳ್ಳೆಯ ಅವಕಾಶ ಸಿಕ್ಕುತ್ತಿದೆ. ನಾವು ಕೇಳುವುದು ಪ್ರಜಾಪ್ರಭುತ್ವದಲ್ಲಿ ಯಾರ ಮೇಲೆ ಪ್ರಥಮಾಫೇಸಿ ಕೇಸ್ ಇದೆ ಆಪಾದನೆ ಇದೆ ಅಪರಾಧವನ್ನು ಕೆಲಸದಲ್ಲಿ ಇಟ್ಟು ಪ್ರಜಾಪ್ರಭುತ್ವದ ಮೌಲ್ಯಕ್ಕೇ ಧಕ್ಕೆ ತರುತ್ತಿದ್ದಾರೆ. ಅವರನ್ನು ಸಸ್ಪೆಂಡ್‌ನಲ್ಲಿಟ್ಟು ಎನ್‌ಕ್ವೈರಿ ಮಾಡಬೇಕು. ಅದನ್ನು ಬಿಟ್ಟು ಈ ರೀತಿ ಮಾಡಿದರೆ ಏನು ನ್ಯಾಯ ಸಿಗುತ್ತದೆ ? ಮಂತ್ರಿಗಳು ಹೀಗೆ ಆಗಬಾರದು ಹಾಗೆ ಆಗಬಾರದು ಎಂದು ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿಯುತ್ತಾರೆ. ಇಂಥದ್ದಕ್ಕೆ ಪ್ರಜಾಪ್ರಭುತ್ವದ ಮೌಲ್ಯದ ಆಡಿಯಲ್ಲಿ ರಕ್ಷಣೆ ಸಿಕ್ಕಿದರೆ ನಾವು ಏತಕ್ಕೆ ಇಲ್ಲಿ ಕುಳಿತು ಹೊಂಡು ಕೆಲಸ ಮಾಡಬೇಕು ? ಸರ್ಕಾರದ ಹಣವನ್ನು ದುರುಪಯೋಗ ಮಾಡಿದವನನ್ನು ಸಸ್ಪೆಂಡ್ ಮಾಡಬೇಕೆಂದು ನಾವೇನು ಕಾನೂನಿಗೆ ವಿರುದ್ಧವಾಗಿ ಕೇಳುತ್ತಿಲ್ಲ. ಅವರು ಜಿಲ್ಲಾ ಪರಿಷತ್ತಿನ ರೂಲ್ಸ್ ರೆಗ್ಯುಲೇಷನ್ ಹೇಳಂತಿದ್ದಾರೆ. ಅದು ನಮಗೆ ಬೇಕಾಗಿಲ್ಲ. ಅವ್ಯವಹಾರವಾಗಿದೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಕೂಡಲೇ ಉತ್ತರಿಸಬೇಕು.

ಅಧ್ಯಕ್ಷರು.—ನೀವು ಯಾರನ್ನು ಸಸ್ಪೆಂಡ್ ಮಾಡಬೇಕೆಂದು ಹೇಳುತ್ತೀರಿ ಅದನ್ನೇ ಅವರು ಸಿಒಡಿ. ಎನ್‌ಕ್ವೈರಿ ರಿಪೋರ್ಟ್ ಬಂದ ತಕ್ಷಣ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಮಂಜುನಾಥ್ ಅವರು ಅನುಭವಿ ಶಾಸಕರು ಮತ್ತು ನನ್ನ ಹಳೆಯ ಸ್ನೇಹಿತರಂ. ನಾನು ಹೇಳಿರತಕ್ಕ ಮಾತನ್ನು ಈ ರೀತಿ ಅಪಾರ್ಥ ಮಾಡುತ್ತಾರೆಂದು ಯಾವ ಕಾಲಕ್ಕೂ ನಂಬುವುದಿಲ್ಲ. ಅವರ ಬಗ್ಗೆ ನನಗೆ ಗೌರವ ಇರುವುದರಿಂದ ಹೆಚ್ಚಿಗೆ ಉತ್ತರಿಸುವುದಕ್ಕೆ ಹೋಗುವುದಿಲ್ಲ. ಒಂದು ಮಾತು ಹೇಳುತ್ತೇನೆ ....

(INTERRUPTION)

SRI C. BYREGOWDA.—Sir, the hon, Minister is replying and Sri K, Lakkappa is standing and the house is not in order, What is this.

MR. SPEAKER.—Order please,

(INTERRUPTION)

ಶ್ರೀ ಎಂ. ವೈ. ಘೋರ್ಪಡೆ.—ಅಲ್ಲಿ ರಾಜಕೀಯವಾಗಿ ಒಂದು ತೊಂದರೆ ಇದೆ. ಅದು ಒಂದು ಕಾರಣವಿದೆ..... Let me finish it,

(ಗೊಂದಲ)

ರಾಜಕೀಯ ತೊಂದರೆ ಏನಿದೆ ಎಂದರೆ ಅಲ್ಲಿನ ಅಧ್ಯಕ್ಷರೇನಿದ್ದಾರೆ ಅವರು ಮೆಜಾರಿಟಿಯನ್ನು ಕಳೆದು ಕೊಂಡಿದ್ದಾರೆ.

ಅಧ್ಯಕ್ಷರು.—ಯಾವ ಅಧ್ಯಕ್ಷರು?

ಶ್ರೀ ಎಂ. ವೈ. ಘೋರ್ಪಡೆ.—ಗುಲ್ಬರ್ಗಾದ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಮೆಜಾರಿಟಿ ಇಲ್ಲ.
2/3 ಮೆಜಾರಿಟಿ ಇದ್ದರೆ ಮಾತ್ರ ತೆಗೆಯುವುದಕ್ಕೆ ಸಾಧ್ಯ. ಅವರಿಗೆ ಮೆಜಾರಿಟಿ ಇಲ್ಲ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ವೈ. ಘೋರ್ಪಡೆ.—ರಾಜಕೀಯ ವಾತಾವರಣ ಬಿಸಿ ಆಗಿರುವುದರಿಂದ ಇಷ್ಟು ಬಿಸಿಯನ್ನು ನಾವು ನೋಡುತ್ತಿದ್ದೇವೆ.

(INTERRUPTION)

SRI M. Y. GHORPADE.—I am a Minister belonging to the same party. I have no interest an any body If somebody does wrong I am prepaed to punish him.

(ಗೊಂದಲ)

ಶ್ರೀ ಎಂ. ವೈ. ಘೋರ್ಪಡೆ.—ಸಫೋರ್ಟ್ ಇದೆ ಅಂತ ಯಾರಾದರೂ ತಪ್ಪು ಮಾಡಿದರೆ ಅಂತಹವರಿಗೆ ಶಿಕ್ಷೆ ಮಾಡೋಣ.

ಶ್ರೀ ಧರ್ಮಸಿಂಗ್.—ತಾವು ಏಕೆ ಕನ್‌ಫ್ಯೂಸ್ ಮಾಡಿಕೊಳ್ಳುತ್ತೀರಿ?

(ಗೊಂದಲ)

ಶ್ರೀ ಎಂ. ವೈ. ಘೋರ್ಪಡೆ.—ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅವರು ಉತ್ತರ ಕೊಡುವಾಗ.....

ಅಧ್ಯಕ್ಷರು.—ಅವರು ಮಾಡಿದ್ದನ್ನೇ ನೀವೂ ಮಾಡುತ್ತಿದ್ದೀರಿ. ಇಬ್ಬರೂ ಏಕ ಕಾಲದಲ್ಲಿ ನಿಂತು ಕೊಂಡು ಹೇಗೆ ವಿಷಯಗಳನ್ನು ನನ್ನ ಗಮನಕ್ಕೆ ತರುತ್ತೀರಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—೨೦-೨೫ ಜನ ಮಾನ್ಯ ಸದಸ್ಯರು ಒಟ್ಟಿಗೇ ನಿಲ್ಲುತ್ತಾರೆ. ಅವರು ಹೇಗೆ ಉತ್ತರ ಕೊಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಎಷ್ಟು ಜನ ಏಕ ಕಾಲದಲ್ಲಿ ನಿಲ್ಲುತ್ತಾರೆ? ಅವರಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಾದರೂ ಹೇಗೆ?

(ಗೊಂದಲ)

MR. SPEAKER.—Would you please resume your seat I have not called upon you. Would you resume your seat?

ಶ್ರೀ ವಾಟಾಳ್ ನಾಗರಾಜ್.—ಇವರು ಇನ್ನು ಯಾವ ಮಂತ್ರಿಯು ವಿರುದ್ಧವೂ ಈ ತರಹ ಮಾಡಲಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳಲ್ಲಿ ವಿನಂತಿ. ಈ ಪ್ರಶ್ನೆ ಸೀಮಿತವಾದ ಪ್ರಶ್ನೆ. ಸಚಿವರು ಏನು ಉತ್ತರ ಕೊಡಬೇಕೋ ಅದನ್ನು ಕೊಟ್ಟಿದ್ದಾರೆ. ಇನ್ನೂ ನಿಮಗೆ ಇದರ ಬಗ್ಗೆ ಹೆಚ್ಚು ವಿವರಣೆ ಬೇಕು ಎಂದರೆ, ರೂಲ್ಸ್ ಪ್ರಕಾರ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುವುದಾದರೆ, ಅಥವಾ ಇನ್ನೂ ದೊಡ್ಡ ಚರ್ಚೆಗೆ ಅವಕಾಶ ಬೇಕೆಂದಾದರೆ ಬೇರೆ ನೋಟೀಸ್ ಕೊಟ್ಟರೆ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ನೀವು ಬರೆದುಕೊಡಿ.